# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.4556/2015/ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:12.7.2017.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯು:- ಮಾಗಡಿ ತಾಲ್ಲೂಕು ಶಿರಗನಹಳ್ಳಿ ಗ್ರಾಮದ ಸರ್ವೆ ನಂ.12ರಲ್ಲಿ ಅಕ್ರಮವಾಗಿ ಎಂ.ರಾಜಣ್ಣ, ಟಿ.ಆರ್.ಸವಿತ,ಕೆ.ಎಂ.ರಂಗಣ್ಣ ಮತ್ತು ಗರುಡಪ್ಪ ಬಿನ್ ರಂಗಪ್ಪ ಇವರ ಹೆಸರಿನಲ್ಲಿರುವ ಖಾತೆಗಳನ್ನು ರದ್ದುಗೊಳಿಸಿ ಸದರಿ ಜಮೀನನ್ನು ಕಂದಾಯ ಇಲಾಖೆಯ ಸುಪರ್ದಿಗೆ ಪಡೆಯಲು ಸೂಕ್ತ ಕ್ರಮಕೈಗೊಳ್ಳುವಂತೆ** ಸಂಬಂಧಪಟ್ಟವರಿಗೆ ನಿರ್ದೇಶನ ನೀಡುವ ಬಗ್ಗೆ.

*******

ಶ್ರೀ ವಿ.ನಾಗರಾಜ್, ಶ್ರೀರಾಮಪುರದ ನಿವಾಸಿ, ಬೆಂಗಳೂರು, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ ಶಿವಕುಮಾರ್, ತಹಶೀಲ್ದಾರ್, ಮಾಗಡಿ ತಾಲ್ಲೂಕು, (2) ಶ್ರೀ ರವಿಕುಮಾರ್, ಕಂದಾಯ ನಿರೀಕ್ಷಕರು, ಮಾಗಡಿ ತಾಲ್ಲೂಕು ಕಛೇರಿ, (3) ಉಪ ಪೋಲೀಸ್ ಅಧೀಕ್ಷಕರು, ರಾಮನಗರ, ಮತ್ತು (4) ಶ್ರೀ ಮಾರುತಿ, ಆರಕ್ಷಕ ಉಪ ನಿರೀಕ್ಷಕರು, ದಾಬಸ್ ಪೇಟೆ ಪೋಲೀಸ್ ಠಾಣೆ, ನೆಲಮಂಗಲ ತಾಲ್ಲೂಕು, (ಇನ್ನು ಮುಂದೆ ಕ್ರಮವಾಗಿ 1 ರಿಂದ 4ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ಮಾಗಡಿ ತಾಲ್ಲೂಕು ಶಿರಗನಹಳ್ಳಿ ಗ್ರಾಮದ ಸರ್ವೆ ನಂ.12ರ ಗೋಮಾಳ ಜಮೀನಿನಲ್ಲಿ ಎಲ್.ಎನ್.ಡಿ.ಸಿ.ಆರ್.18/94-95ರ ಕಡತ ಸೃಷ್ಟಿಸಿ ಎಂ.ರಾಜಣ್ಣ, ಟಿ.ಆರ್.ಸವಿತ, ಕೆ.ಎಂ.ರಂಗಣ್ಣ ಮತ್ತು ಗರುಡಪ್ಪರವರಿಗೆ ತಲಾ 4 ಎಕರೆಯಂತೆ ಸಾಗುವಳಿ ಚೀಟಿ, ಸ್ಕೆಚ್ ಹಾಗೂ ನಮೂನೆ 53ರ ಅರ್ಜಿಗಳನ್ನು ಎದುರುದಾರರು ಅಕ್ರಮವಾಗಿ ಸೃಷ್ಟಿಸಿ, ಆ

ದಾಖಲೆಗಳ ಆಧಾರದ ಮೇಲೆ ಸದರಿ ಜಮೀನನ್ನು ದೂರುದಾರರಿಗೆ ಕ್ರಯದ ಒಪ್ಪಂದ 1.11 ಕೋಟಿ ರೂ.ಗಳಿಗೆ ಮಾಡಿದ್ದು, ಆದ್ದರಿಂದ ಈ ಬಗ್ಗೆ ತನಿಖೆ ಮಾಡಿ ಎದುರುದಾರರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಕೋರಿ ದೂರು ಸಲ್ಲಿಸಿದ್ದಾರೆ.

3. 1ರಿಂದ 4ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಸದರಿ ಕಡತವು ನಕಲಿ ಸೃಷ್ಟಿಯಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಈ ಬಗ್ಗೆ ದೂರುದಾರರಿಗೆ ಎಲ್.ಎನ್.ಡಿ.(ಆರ್.ಟಿ.ಐ)ಸಿ.ಆರ್.164/2015-16 ದಿ.19.12.2015ರಂದು ಹಿಂಬರಹ ನೀಡಲಾಗಿರುತ್ತದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವೃತ್ತ ಆರಕ್ಷಕ ನಿರೀಕ್ಷಕರು, ಮಾಗಡಿ ಅವರಿಗೆ ದೂರು ನೀಡಲಾಗಿರುತ್ತದೆ. ಆದರೆ ಈ ಅಕ್ರಮ ತಮ್ಮ ಅವಧಿಯಲ್ಲಿ ಜರುಗಿರುವುದಿಲ್ಲ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. ದೂರುದಾರರು ತಮ್ಮ ಪ್ರತ್ಯುತ್ತರ ಸಲ್ಲಿಸಿರುವುದಿಲ್ಲ.

5. ದೂರುದಾರರು ಸಲ್ಲಿಸಿದ ದೂರು ಆಕ್ಷೇಪಣೆ, ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ, ಸರ್ವೆ ನಂ.12 ಮೂಲತ: ಸರ್ಕಾರಿ ಗೋಮಾಳ ಜಮೀನಾಗಿದ್ದು, ಆದರೆ ಎಲ್.ಎನ್.ಡಿ.ಸಿ.ಆರ್.18/1994-95 ರಲ್ಲಿ ಆಗಿನ ಕಂದಾಯ ಅಧಿಕಾರಿಗಳು ಹಾಗೂ ಎಂ.ರಾಜಣ್ಣ, ಟಿ.ಆರ್.ಸವಿತ, ಕೆ.ಎಂ.ರಂಗಣ್ಣ ಮತ್ತು ಗರುಡಪ್ಪ ಬಿನ್ ರಂಗಪ್ಪ ಇವರೊಂದಿಗೆ ಷಾಮೀಲಾಗಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಖಾತೆ ಪಹಣಿ ಮಾಡಿರುತ್ತಾರೆ. ಆನಂತರ ಈ 4 ಜನರು ದೂರುದಾರರೊಂದಿಗೆ ಈ ಜಮೀನನ್ನು 1.11 ಕೋಟಿ ರೂ.ಗಳಿಗೆ ಕ್ರಯ ಒಪ್ಪಂದ ಮಾಡಿಕೊಂಡಿರುತ್ತಾರೆ. ದೂರುದಾರರು ಈ ಬಗ್ಗೆ 2015ರಲ್ಲಿ ತಹಶೀಲ್ದಾರರ ಕಛೇರಿಯಲ್ಲಿ ದಾಖಲೆ ಪರಿಶೀಲಿಸಲಾಗಿ ಈ 4 ಜನರು ಖೊಟ್ಟಿ ದಾಖಲೆ ಸೃಷ್ಟಿಸಿ ಗೋಮಾಳ ಜಮೀನನ್ನು ತಮ್ಮ ಹೆಸರಿನಲ್ಲಿ ಮಾಡಿಕೊಂಡಿದ್ದಾರೆಂದು ಕಂಡುಬಂದಿರುತ್ತದೆ. ಆಗ ದೂರುದಾರರು ಮಾಗಡಿ ಪೋಲೀಸ್ ಠಾಣೆಯಲ್ಲಿ ಮೊ.ಸಂ.336/2015 ದಿ.31.10.2015ರಂದು ಕ್ರಿಮಿನಲ್ ಪ್ರಕರಣ ದಾಖಲಿಸಿರುತ್ತಾರೆ.

6. ಎದುರುದಾರರು ಈ ಜಮೀನುಗಳ ನಕಲಿ ದಾಖಲೆಗಳನ್ನು ಆಗಿನ ಕಂದಾಯ ಅಧಿಕಾರಿಗಳು ಸೃಷ್ಟಿಸಿದ್ದಾರೆಂದು ತಮ್ಮ ಆಕ್ಷೇಪಣೆಯಲ್ಲಿ ತಿಳಿಸಿರುತ್ತಾರೆ. ಹೀಗಾಗಿ ಸರ್ಕಾರಿ ಗೋಮಾಳ ಜಮೀನಿನ ಬಗ್ಗೆ ನಕಲಿ ದಾಖಲೆ ಸೃಷ್ಟಿಸಿ ಖಾಸಗಿ ವ್ಯಕ್ತಿಗಳು ತಮ್ಮ ಹೆಸರಿನಲ್ಲಿ ಖಾತೆ ಮಾಡಿಕೊಂಡಿದ್ದು ಕಂಡುಬರುತ್ತದೆ. ಆದರೆ ಈ ರೀತಿ ನಕಲಿ ದಾಖಲೆ ಸೃಷ್ಟಿಸಲು ಯಾವ ಅಧಿಕಾರಿಗಳು ಕಾರಣಕರ್ತರೆಂದು ಈ ಹಂತದಲ್ಲಿ ತಿಳಿಯಲು ಸಾಧ್ಯವಾಗುತ್ತಿಲ್ಲ. ಏಕೆಂದರೆ 1994–95ರಲ್ಲಿ ಈ ನಕಲಿ ದಾಖಲೆಗಳನ್ನು ಸೃಷ್ಟಿಸಿ ಖಾತೆ ಮಾಡಿರುವುದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ.8(2)(ಡಿ) ಅಡಿಯಲ್ಲಿ ಎದುರುದಾರರ ವಿರುದ್ದ ಅಥವಾ ಆ ದಾಖಲೆಗಳನ್ನು ಸೃಷ್ಟಿಸಿದ ವ್ಯಕ್ತಿಗಳ ವಿರುದ್ದ ಕ್ರಮ ಕೈಗೊಳ್ಳಲು ಕಾಲಪರಿಮಿತಿ ಇರುವುದಿಲ್ಲ.

7. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, **ಶಿರಗನಹಳ್ಳಿ ಗ್ರಾಮದ ಸರ್ವೆ ನಂ.12ರಲ್ಲಿ ಅಕ್ರಮವಾಗಿ ಎಂ.ರಾಜಣ್ಣ, ಟಿ.ಆರ್.ಸವಿತ,ಕೆ.ಎಂ.ರಂಗಣ್ಣ ಮತ್ತು ಗರುಡಪ್ಪ ಬಿನ್ ರಂಗಪ್ಪ ಇವರ ಹೆಸರಿನಲ್ಲಿರುವ ಖಾತೆಗಳನ್ನು ರದ್ದುಗೊಳಿಸಿ ಸದರಿ ಜಮೀನನ್ನು ಕಂದಾಯ ಇಲಾಖೆಯ ಸುಪರ್ದಿಗೆ ಪಡೆಯಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು** ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

8. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 12/7/17.

**[ ನ್ಯಾಯಮೂರ್ತಿ ಸುಭಾಷ್ ಬಿ ಅಡಿ]**

**ಉಪಲೋಕಾಯುಕ್ತರು,**

**ಕರ್ನಾಟಕ ರಾಜ್ಯ.**

Sd/- 12/7